ಶೈಲಿ ಕೂಡ ಬೇರೆ ಕಡೆ ಕೊಡಬಹುದಾದಂತಹ ತೊಂದರೆಗಳನ್ನು ತರಲಾರದು ಎಂದು ಸಮಾಧಾನಗೊಂಡ. ಆದರೆ ಅಷ್ಟು ದೂರ ಹೋಗಿ ನೆಲೆಸಿ ಬಿಡುವುದು ಬೇಸರ ಎನ್ನಿಸಿತು. ಹುಟ್ಟಿದಂದಿನಿಂದ ಮೈಸೂರು ಬಿಟ್ಟು ಎಂದೂ ಹೋದವನಲ್ಲ. ಮೈಸೂರೆಂದರೆ ಅವನಿಗೆ ಜೀವ ಅಲ್ಲಿನ ಸುಖ, ಶಾಂತಿ, ತೃಪ್ತಿ ಇಡೀ ಪ್ರಪಂಚದಲ್ಲಿ ಎಲ್ಲೂ ಸಿಗುವುದಿಲ್ಲ ಎಂದವನ ಭಾವನೆ. ಆದರೆ ಇಲ್ಲಿದ್ದರೆ ತನ್ನ ಮತ್ತು ಗಂಗೆ ಸಂಬಂಧದ ವಿಚಾರದಲ್ಲಿ ಇದ್ದ ಜನ ಭಯ ಅವನನ್ನು ತಲ್ಲಣಗೊಳಿಸಿತ್ತು. ಇಲ್ಲಿರುವುದಂತೂ ಖಂಡಿತ ಬೇಡ ಎಂದು ನಿರ್ಧರಿಸಿದ ಮೇಲೆ ಮುಂಬೈ ಹೋಲುವ ಇಂದಿನ ಬೆಂಗಳೂರು ಅವನ ಆಯ್ಕೆ ಆಯಿತು.

## ಮೈಸೂರು ಬಿಟ್ಟು ಬೆಂಗಳೂರು ಸೇರುವ ನಿರ್ಧಾರ

ಗಂಗೆಗೆ ಅದನ್ನು ತಿಳಿಸಿದಾಗ ಅವಳೂ ಸಮ್ಮತಿಸಿದಳು. ದಸರೆ ಕಳೆದ ಮೇಲೆ ಹೊರಡುವುದು ಎಂದುಕೊಂಡರು. ಈ ಹೊಸ ನಿರ್ಧಾರದಿಂದ ಪ್ರಸಾದ ಯಾವುದೊ ಭಾವೋದ್ವೇಗಕ್ಕೆ ಒಳಗಾದ. ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತ ತೋಟದ ಬಳಿ ರಸ್ತೆಲಿ ನಡೆದ. ಮಣ್ಣು ರಸ್ತೆಯ ದಿಣ್ಣೆ, ಕೊರಕಲ ಮೇಲೆ ಪಕ್ಷಿಯಂತೆ ಹಾರಿ ಹಾರಿ ನಡೆದ. ಸುತ್ತಲ ಮರ, ಲೈಟು ಕಂಬ, ಎಲ್ಲ ಹೊಸತಾಗಿ ಕಂಡಿತು. ತನ್ನಲ್ಲಾಗುತ್ತಿರುವ ಬದಲಾವಣೆ ಕನಸಿನಲ್ಲಿ ಕಂಡಂತೆ ಅನ್ನಿಸಿತು. ಅವನು ಕ್ರಾಂತಿಯೊಂದರ ಹಾದಿಯಲ್ಲಿ ನಡೆಯುವುದು ಅವನಿಗೆ ತಿಳಿಯದಾಗಿತ್ತು.

'ನಾನು ನೀವಂದುಕೊಂಡ ಪ್ರಸಾದ ಅಲ್ಲ...! ಆ ಪ್ರಸಾದ ಹೋಗಿಬಿಟ್ಟ...! ಆ ಬಿಳಿಚಿಕೊಂಡ, ನಿರ್ಬಲ ನಾನಲ್ಲ. ಅಂತರಂಗದಲ್ಲೊಂದು ಬಹಿರಂಗದಲ್ಲೊಂದು ಅಂಗಿ ಹಾಕಿಕೊಂಡು ವಂಚಿಸಿ ಬಾಳಬೇಕಿಲ್ಲ. ನ್ಯಾಯವಾದದ್ದನ್ನು ಮಾಡಲು ಹೊರಟಿರುವೆ! ಆಧುನಿಕ ಮನೋಭಾವದಿಂದ ಬಾಳಬಲ್ಲ ಹೊಸ ಮನುಷ್ಯ...! ಯಾರ ಮೂದಲಿಕೆಯಲ್ಲಿ ಇನ್ನು ಮುಂದೆ ದಿನ ಕಳೆಯಬೇಕಿಲ್ಲ. ಪಾಪಪ್ರಜ್ಞೆ ಹೊತ್ತು ಸುಳ್ಳು ಜೀವನ ಮುಂದೆ ಮಾಡಬೇಕಿಲ್ಲ. ಏಳು ವರ್ಷಕಾಲ ಅನ್ಯಾಯದ ಕಂಬಿಯಲ್ಲಿ ಸುಟ್ಟುಕೊಂಡು ಬೆಂದುಹೋಗಿದ್ದೆ. ಈಗ ಆಗಾಯಕ್ಕೆ ಮುಲಾಮು ಕಂಡುಕೊಂಡಿದೀನಿ. ಯಾರಿಲ್ಲದಿದ್ದರೂ ದೇವರಾದರೂ ನನ್ನ ಹೊಸ ಹೆಜ್ಜೆ ಮೆಚ್ಚಿಕೊಳ್ಳುತ್ತಾನೆ...!

ಅವನು ಹೋಗಿ, ತನ್ನ ಕೋಣೆಯನ್ನು ಸೇರಿಕೊಂಡ. ಅಲ್ಲಿನ ಮಂಚ ಕಿಟಕಿ, ಪುಸ್ತಕಗಳನ್ನೆಲ್ಲಾ ನೋಡಿದ. ಎಲ್ಲದರ ಉಪಯೋಗ ಪಡೆದಿದ್ದರ ನೆನಪು ಅಲೆಯಂತೆ ಬಂದು ಅಪ್ಪಳಿಸಿತು. ಭಗವದ್ಗೀತೆ ಇದೆ, ಪ್ರಬಂಧಗಳಿವೆ, ರಾಮಾಯಣ ಮಹಾಭಾರತದ ಸಂಸ್ಕೃತ ಅವತರಿಣಿಕೆ ಇದೆ. ಶ್ಲೋಕಗಳ ಸಾಲು ಸಾಲು ಪುಸ್ತಕಗಳೂ ಇವೆ. ತಾನು ಪ್ರವಚನ ಮಾಡುವ ಮೊದಲು ಮಾಡಿಕೊಳ್ಳುತ್ತಿದ್ದ ಟಿಪ್ಪಣಿಗಳ ಕಾಗದದ ಚೂರುಗಳಿವೆ, ದೇವಸ್ಥಾನದ ಮೀಟಿಂಗ್‌ನ ಬಗ್ಗೆ ಮಾಡಿಟ್ಟುಕೊಳ್ಳುತ್ತಿದ್ದ ಪಟ್ಟಿ ಅಲ್ಲೇ ಕುಳಿತಿದೆ. ಇದನ್ನೆಲ್ಲಾ ಯಾರದ್ದೋ ವಸ್ತುಗಳು, ತನ್ನದ್ದಲ್ಲ ಎಂಬ ಭಾವ ಬಂದುಬಿಟ್ಟಿತು. ಕೈಗೆ 'ವೇದಾಂತ ದರ್ಶನ'ದ ಮಾಸಪತ್ರಿಕೆ ತೆಗೆದುಕೊಂಡು ಕುರ್ಚಿ ಮೇಲೆ ಕುಳಿತುಕೊಂಡ. ಕೆಲವು ನಿಮಿಷ ಕಳೆಯುವುದಕ್ಕಿಲ್ಲ; ತೆರೆದಿದ್ದ ಮುಂಬಾಗಿಲು ತಳ್ಳಿಕೊಂಡು ಯಾರೋ ಅವನ ಕೋಣೆ ಸಮೀಪಿಸಿದ ಹೆಜ್ಜೆ ಸಪ್ಪಳವಾಯಿತು.

'ಯಾರೂ...?' ಎಂದ ಪ್ರಸಾದ.

ಅಲ್ಲಿ ಶಿವಣ್ಣ ಪ್ರತ್ಯಕ್ಷನಾಗಿ ಬಿಟ್ಟ.

ಪ್ರಸಾದ ಎದೆ ಮೇಲೆ ಕೈ ಇಟ್ಟುಕೊಂಡು ಎದ್ದು ನಿಂತ. ಪುಸ್ತಕ ಜಾರಿ ಬಿದ್ದುಬಿಟ್ಟಿತು.

### ಮಳೆ

ಎಲ್ಲರ ಬಳಿಯೂ ಇದೆ ಕೊಡೆ
ಆದರೆ
ಯಾರ ಬಳಿಯೂ ಇಲ್ಲ
ತಮ್ಮದೇಯಾದ ಮಳೆ!

★ ವಿ.ಪುಗಳೇಂದಿ




'ಹ್ಯಾಂಗಿದೀರಾ ಪ್ರಸಾದಪ್ಪಾ...' ಶಿವಣ್ಣ ನಾಟಕೀಯವಾಗಿ ಪ್ರಶ್ನೆ ಹಾಕಿದ್ದರ 'ದನಿ' ಪ್ರಸಾದನಿಗೆ ಅರ್ಥವಾಯಿತು.

'ಎಲ್ಲೋ ತಿರುಗಾಡಿ ಬಂದ್ವಾಂಗ ಸುಸ್ತಾಗಿ ಕಾಣ್ತಿದೀರಲ್ರಿ? ಪುರೋಹಿತ್ರೆ ಎಲ್ಲಿ ಹೋಗಿದ್ರಿ...?'

ದಸರೆ ಸಮೀಪಿಸಿ ಬರ್ಲಿಕ್ ಹತ್ತದ್ರೀ... ಹೀಗ್ ಆಯಾಸ ಮಾಡ್ಕಂತ್ರೆ ಹ್ಯಾಂಗ್ರಿ...? ಗುಡಿ ಜವಾಬ್‌ದಾರಿ ನಿಮ್ಮ ತಲೀಮ್ಯಾಗೇ ಐತಲ್ರಿ...? ಹಿಂಗ ಹೊರಗಿನ ಗಾಳೀಲಿ ಸುತ್ತಾಡಿದ್ರೆ ಮೈಗಾಗಲ್ರೀ...'

'ಹಾಗೇನಿಲ್ಲ... ನನ್ನ ಆರೋಗ್ಯ ಮುಂಚೆಗಿಂತಾ ಎಷ್ಟೋ ಚೆನ್ನಾಗಿದೆ... ಹೊರಗಿನ ಹವೆ ನಂಗೆ ಒಳ್ಳೇದನ್ನೇ ಮಾಡತಪ್ಪಾ... ಇನ್ನು ಮುಂದೆ ನನಗೆ ಔಷಧೀನೂ ಬೇಕಾಗುದಿಲ್ಲ...'

'ಗೊತ್ತೈತ್ರೀ... ಗೊತ್ತತಿ...' ಎಂದು ನಕ್ಕಂತೆ ಮಾಡಿದ ಶಿವಣ್ಣ. ಅವನ ದ್ವೇಷದ ಅನುಭವ ಪ್ರಸಾದನಿಗಾಯಿತು. ಗಂಗೆ ಬಳಿ ಕೆಲ ಕಾಲದ ಹಿಂದೆ ಮಾತಿಗೆ ಬಿದ್ದಾಗ ಪ್ರಸಾದನ ಬಗ್ಗೆ ಅರಿವಾಗಿತ್ತು. ಶಿವಣ್ಣನಿಗೂ ಸಹ..

ಪ್ರಸಾದನಿಗೂ ಈ ಮನಷ್ಯನ ಮೇಲೆ ವಿಪರೀತ ಅಸಮಾಧಾನವಿತ್ತು. ಇಬ್ಬರೂ ಒಳೊಳಗೇ ಕತ್ತಿ ಮಸೆಯುತ್ತಾ, ಮಾತಾಡುವ ಮಾತಿನಲ್ಲಿ ದ್ವಂದ್ವಾರ್ಥವಿರುತ್ತಿತ್ತು. ಇಬ್ಬರೂ ಅದನ್ನು ಅರಿತರೂ, ಇಬ್ಬರೂ ಹೊರಗೆ ತೋರ್ಪಡಿಸಿಕೊಳ್ಳುತ್ತಿರಲಿಲ್ಲ.

'ಪ್ರಸಾದಪ್ಪ, ದಸರೆಲಿ ನೀವು ಮಂದಿಗೆ 'ಹೀರೊ' ಅಲ್ಲೇನ್ರಿ?... ನಿಮ್ಮ ಉಪನ್ಯಾಸ ಅಂತೀರಲ್ಲಾ... ಅದ್ನ ಎಲ್ಲಾ ಮಂದಿ ಹೊಗಳಿ ಹಾಡಬೇಕಲ್ವೇನ...? ರಥೋತ್ಸವದಾಗ ನೀವು ಎದ್ದು ಕಾಣ್‌ಬೇಕಲ್ರೀ... ಭಲೋ ಹೆಸರು ಮಾಡಬೇಕಲ್ರೀ...'

'ಹೌದು... ನನ್ನ ಆರೋಗ್ಯ ಚೆನ್ನಾಗಿದೆ... ಮುಂದಿನ ವರ್ಷದ ವೇಳೆಗೆ ನನ್ನ ಪರಿಸ್ಥಿತಿ ಬಹಳ ಉತ್ತಮವಾಗಿರುತ್ತೆ... ಜನ ನನ್ನನ್ನ ಆಗ ನೋಡುವ ಮಟ್ಟ ಬೇರೆ ಇರತ್ತೆ. ನಿಮ್ಮ ನಾಟಿ ಔಷಧಿ ನಿಲ್ಲಿಸಿ, ನಾನು ಇನ್ನೂ ಹೆಚ್ಚಿನ ಆರೋಗ್ಯ ಪಡೆದು ಮತ್ತಷ್ಟು ಹುರಪಿನಿಂದ ಕೆಲ್ಸಕಾರ್ಯ ಮಾಡ್ತೀನಿ!...'

'ನೀ ಹೇಳೂದು ಕೇಳಿದ್ರ ಆನಂದ ಆಗತೈತ್ರಿ... ಇಷ್ಟು ಕಾಲ ನಾ ಕೊಟ್ಟ ದವ ಮೈಗೆ ಊರಿಹೋಗಿ ಮುಂದಲ ವರ್ಷ ಅದರ ಪರಿಣಾಮ ಕಾಣತ್ರದ್ರೀ...'

'ನಿಮ್ಮ ಔಷಧಿಗಳಿಗಾಗಿ ನಿಮಗೆ ಧನ್ಯವಾದಗಳು...' ಬೇಕಂತಲೇ ಕೈ ಮುಗಿದನು.

'ನಿಮ್ಮಂತಹ ಮಂದಿ ಪ್ರಾರ್ಥನ ದೇವ್ರಿಗೆ ಬ್ಯಾಗ ಮುಟ್ತಾದ್ರಿ... ಅದರ ಪರಿಣಾಮ ತಿಳೀತದೆ ಬಿಡ್ರಿ... ಆಯ್ತು... ನಾ ಬರ್ತೀನ್ರಿ... ಹಿಂಗಾ ಈ ರಸ್ತೆಯಾಗ ಹೋಗ್‌ತಿದ್ದಿ.... ... ನಿಮ್ಮ ಮನೆ ಬಾಕ್ಲ ತೆರೆದಿತ್ತು... ಹಂಗೇ ನೀವಿದ್ರೆ ನೋಡಿ ಹೋಗೋವ ಅಂತೈಸಿ ಬಂದೇನ್ರಿ... ನಾ ಹೊಂಟಿ... ಬಾಕ್ಲ ಹಾಕ್ಕೊಳ್ರೀ...'

ಅವನು ಹೋದ ಕೂಡಲೇ ಪ್ರಸಾದನಿಗೆ ಹಸಿವು ಕಂಡಿತು. ಇಷ್ಟರತನಕ ನಾನು ಊಟ ಕೂಡಾ ಮರೆತುಬಿಟ್ಟದ್ದು ನೆನಪಾಯಿತು. ಮನೆ ಒಳಗೆ ತಾಯಿ ಅನ್ನೊ ಜೀವ ಇದ್ದಿದ್ದರೆ ಹೀಗೆ ಹಸಿವಾಗಲು ಬಿಡುತ್ತಲೇ ಇರಲಿಲ್ಲ. ಮೇಲಿಂದ ಮೇಲೆ ಏನಾದರೂ ತಿನ್ನಲು ತಂದು ತಂದು ಬಲವಂತದಿಂದ ತಿನ್ನುವಂತೆ ಮಾಡುತ್ತಿದ್ದಳು. ಪಾಪ ತಂದೆ... ಅವರೇ ಅಡಿಗೆ ಮಾಡಿಟ್ಟು ಹೋಗುತ್ತಾರೆ... ಇಡೀ ದಿನ ದೇವಸ್ಥಾನದಲ್ಲಿ ಏನಾದರೊಂದು ಕೆಲಸ ಇರುತ್ತಿತ್ತು. ಅಡಿಗೆ ಮಾಡಿಟ್ಟು ಬಿಟ್ಟರೆ ಮಗ ಯಾವಾಗಲಾದರೂ ಬಂದು ತಿನ್ನುತ್ತಾನೆಂದು ಅವರ ನಂಬಿಕೆ. ಪ್ರಸಾದ ಈಚೆಗೆ ಊಟ ಮಾಡುವುದರಲ್ಲಿ ಕ್ಲಿಪ್ತತೆ ಪಾಲಿಸುತ್ತಿರಲಿಲ್ಲ. ಒಂದೊಂದು ದಿನ ಒಂದೊಂದು ವೇಳೆಲಿ ಬಂದು ಒಂದಿಷ್ಟು ತಿಂದು ಹೋಗುತ್ತಿದ್ದ. ಆದರೆ ಇಂದಿನ ಹಸಿವು ಅವನಿಗೆ ಈಚೆಗೆ ಎಂದೂ ಅನುಭವಕ್ಕೆ ಬಂದಿರಲಿಲ್ಲ. ಅಡುಗೆ ಮನೆಗೆ ಹೋಗಿ ತಟ್ಟೆಗೆ ಬೇಕಾದ್ದು ಹಾಕಿಕೊಂಡು ತೃಪ್ತಿಯಾಗಿ ತಿಂದು ಬಂದ. ಪುಸ್ತಕ ಹಿಡಿದು ಕುಳಿತ. ನಂತರ ಬರವಣಿಗೆಯಲ್ಲಿ ತೊಡಗಿದ. ಮುಂದಿನ ವಾರಕ್ಕೆ ಕೊಡುವ ಉಪನ್ಯಾಸದ ರೂಪು ರೇಷೆಗಳವು. ಆದರೆ ಬರೆಯುತ್ತಾ ಹೋದಂತೆ ಅದು ಒಂದು ದೀರ್ಘ ಲೇಖನವೇ ಆಗಿ ಬಿಟ್ಟಿತು. ಅವನಿಗರಿವಿಲ್ಲದೆಯೇ ಲೇಖನಿ ಬರೆಯುತ್ತಲೇ ಹೋಗಿಬಿಟ್ಟಿತು...! ವಿಷಯ 'ಸಂಸ್ಕೃತಿಯಲ್ಲಿ ಮಾಡಿಟ್ಟ ಕೃತಕ ಚೌಕಟ್ಟುಗಳು' ಅದೊಂದು ಪುಟ್ಟ ಹೊತ್ತಿಗೆಯೇ ಆಗುವಷ್ಟು ದೀರ್ಘವಾಯಿತು. ಏಕೆ ಬರೆದನೊ ಅವನೇ ಅರಿವಾದ. ಸಂಜೆ ಆಗಿ, ರಾತ್ರಿ ಆಗಿ, ಇಡೀ ರಾತ್ರಿ ನಿದ್ದೆಯೂ ಮಾಡದೆ ಬರೆಯುತ್ತ ಹೋದ. ತಂದೆ ಬಂದರೂ ಮಗ ಅದೇನೊ ಅಧ್ಯಯನ